ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ
ಕೆ ಆರ್ ನಗರ.

**ಸಿಸಿ ನಂ. 1729/2021**

ಪಿರ್ಯಾದುದಾರರುಃ ಸರ್ಕಾರದ ಪರ ಕೆ ಆರ್ ನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ ವೆಂಕಟೇಶನಾಯಕ,
ಬಿನ್ ಲೇಟ್ ತಿಮ್ಮನಾಯಕ,
48 ವರ್ಷ,
ವಾಸಃ ಆಜುನಹಳ್ಳಿ ಗ್ರಾಮ,
ಕೆ ಆರ್ ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀಮತಿ ಪವಿತ್ರ ಆರ್. ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯದಂಡಾಧಿಕಾರಿಗಳು, ಕೆ ಆರ್ ನಗರ ಆದ ನಾನು ಈ ಕೆಳಗಿನಂತೆ ಅಪರಾಧವನ್ನು ನೀವು ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ದಿನಾಂಕ 04.07.2019 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಕೆ ಆರ್ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಅರ್ಜುನಹಳ್ಳಿ ಗ್ರಾಮದ ಚಾಸಾ1-ನಾಗೇಶರವರ ವಾಸದ ಮನೆಯ ಮುಂಭಾಗ ಆರೋಪಿಯಾದ ನೀವು ಚಾಸಾ1 ರವರ ಜೊತೆ ಜಾಗದ ವಿಚಾರದಲ್ಲಿದ್ದ ಹಳೆಯ ದ್ವೇಷದಿಂದ ತೀಟೆ ಜಗಳ ತೆಗೆದು ಚಾಸಾ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ1 ರವರಿಗೆ ಪದೇ ಪದೇ ಜಾಗದ ವಿಚಾರದಲ್ಲಿ ತೊಂದರೆ ಮಾಡುತ್ತೀಯಾ ನಿನಗೆ ಸರಿಯಾಗಿ ಬುದ್ಧಿ ಕಲಿಸುತ್ತೀನಿ ನೋಡು ಎಂದು

ಹೇಳಿಕೊಂಡು ನಿಮ್ಮ ಮನೆಯಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬಂದು ಚಾಸಾ1 ರವರ ಎಡಭಾಗದ ಕೆನ್ನೆಯ ಬಳಿ ಹೊಡೆದು ತೀವ್ರ ಸ್ವರೂಪದ ರಕ್ತಗಾಯಪಡಿಸಿರುತ್ತೀರಿ. ಆ ಪ್ರಕಾರ ಭಾರತೀಯ ದಂಡ ಸಂಹಿತೆ ಕಲಂ 326 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ಸಹಿ/-

ದಿಃ 30.04.2022

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಕೆ ಆರ್ ನಗರ.